ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಮೂಹ (ಅ) ರಲ್ಲಿರುವ 917, 917ಎ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು : ಯಾವುದಕ್ಕೆ ಉತ್ತರ ಬಂದಿಲ್ಲ ಎಂದು ಹೇಳುತ್ತಿದ್ದೀರಿ? ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗೋ ಅಥವಾ ಬಾಯಿ ಮಾತಿನ ಪ್ರಶ್ನೆಗೆ ಬಂದಿಲ್ಲ ಎಂದು ಹೇಳುತ್ತಿದ್ದೀರೋ?

ಶ್ರೀ ಜಿ.ವಿ. ರಾಮರೆಡ್ಡಿ : ಇನ್ನೂ 3 ಪ್ರಶ್ನೆಗಳು ಇವೆ. ಬಾಯಿ ಮಾತಿನಲ್ಲಿ ಕೇಳಿರತಕ್ಕ ಪ್ರಶ್ನೆಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು : ನಿಮ್ಮ ಪ್ರಶ್ನೆ ಆಗಲೇ ಬಂತಲ್ಲಾ

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ದ.ಕ. ಜಿಲ್ಲೆಯ ಉಲ್ಲಾಳ ವಿಧಾನ ಸಭಾಕ್ಷೇತ್ರದಲ್ಲಿ ಕಳಪೆದರ್ಜೆ ಅಕ್ಕಿ ಮಾಡುತ್ತಿರುವ ಬಗ್ಗೆ

ಶ್ರೀ ಕೆ. ಜಯರಾಮ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೇ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ವಿಶೇಷವಾಗಿ ನನ್ನ ಕ್ಷೇತ್ರವಾದ ಉಲ್ಲಾಳ ವಿಧಾನ ಸಭಾ ಕ್ಷೇತ್ರದಲ್ಲಿ 3-4 ತಿಂಗಳಿಂದ ಸಹಕಾರ ಸಂಘಗಳಲ್ಲಿ ಮತ್ತು ಪಡಿತರ ಅಕ್ಕಿ ವಿತರಣಾ ಕೇಂದ್ರಗಳಲ್ಲಿ ಕಳಪೆ ದರ್ಜೆಯ ಅಕ್ಕಿಯನ್ನು ವಿತರಣೆ ಮಾಡುತ್ತಿದ್ದಾರೆ. ತುಂಡಾದ ಅಕ್ಕಿ, ಹಾಳಾದ ಅಕ್ಕಿ ಮತ್ತು ಓಲ್ಡ್ ಸ್ಟಾಕ್ ಇರುವಂಥಾದ್ದು, ವಾಸನೆಬರುವಂಥಾದನ್ನು ವಿತರಿಸುತ್ತಿದ್ದಾರೆ. ಇದರ ಗಂಜಿ ಅಥವಾ ಅನ್ನವನ್ನು ಊಟ ಮಾಡಲಿಕ್ಕೆ ಸಾಧ್ಯತೆಯೇ ಇಲ್ಲದಿರುವಂಥ ಪ್ರಸಂಗ ತಲೆದೋರಿದೆ. ಜನ ನಮ್ಮ ಮೇಲೆ ಆಪಾದನೆ ಹೊರಿಸುತ್ತಿದ್ದಾರೆ. ಈ ಅಕ್ಕಿಯಿಂದ ಯಾವುದೇ ರೀತಿಯ ತಿಂಡಿಯನ್ನು ಮಾಡಲಿಕ್ಕೆ ಬರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಒಳ್ಳೆಯ ಅಕ್ಕಿ ಬಂದಾಗ, ಆ ಒಳ್ಳೆಯ ಅಕ್ಕಿಯನ್ನು ಮಾರಿ ಪುನಃ ಓಲ್ಡ್ ಸ್ಟಾಕ್ ಅಕ್ಕಿಯನ್ನು ಕೊಡುತ್ತಾರೆ ಎಂದು ಅಲ್ಲಿಯ ಜನ ಅಕ್ಕಿಯನ್ನು ತೆಗೆದುಕೊಳ್ಳುತ್ತಿಲ್ಲ. ಈಗ ನಮ್ಮ ಕ್ಷೇತ್ರದಲ್ಲಿ ವಿದ್ಯುತ್ ಇಲ್ಲ, ಕೊಳಚೆ ನೀರು ಬರುತ್ತಿದೆ. ಅದರ ಮೇಲೆ ಈ ತರಹದ ಅಕ್ಕಿಯನ್ನು ಕೊಟ್ಟು ಅವರು ಊಟ ಮಾಡಿದ್ದೇ ಆದರೆ ಖಂಡಿತವಾಗಿಯೂ ಅನಾರೋಗ್ಯದಿಂದ ಬಳಲುವಂಥ ಸನ್ನಿವೇಶ ಇರುವುದರಿಂದ ಇದರ ಕಡೆಗೆ ಸರ್ಕಾರದ ಗಮನವನ್ನು ನಾನು ಸೆಳೆಯುತ್ತಿದ್ದೇನೆ.

ಶ್ರೀ ಎಸ್. ನಂಜಪ್ಪ : ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರ ಕಳಪೆ ಅಕ್ಕಿಯನ್ನು ಸರಬರಾಜು ಮಾಡಬಾರದು ಎಂದು ಸಾಕಷ್ಟು ಗಮನ ಹರಿಸಿ ಭಾರತದ ಆಹಾರ ನಿಗಮದ ಅಧಿಕಾರಿಗಳಿಗೆ ಕಳಪೆ ದರ್ಜೆ ಅಕ್ಕಿಯನ್ನು ಸರಬರಾಜು ಮಾಡಕೂಡದು ಎಂದು ಸೂಚನೆಯನ್ನು ಕೊಟ್ಟಿತ್ತು ಮತ್ತು ನಮ್ಮ ಕರ್ನಾಟಕ ಆಹಾರ ಮತ್ತು ನಾಗರೀಕ ಪೂರೈಕೆ ನಿಗಮದವರು ಅದನ್ನು ಎತ್ತುವಳಿ ಮಾಡಬಾರದು ಎಂದೂ ಹೇಳಿದೆ. ನ್ಯಾಯ ಬೆಲೆ ಅಂಗಡಿಯವರೂ ಸಹ ಕಳಪೆ ಅಕ್ಕಿಯನ್ನು ವಿತರಣೆ ಮಾಡುವಂಥ ಸಂದರ್ಭದಲ್ಲಿ ಅದನ್ನು ಎತ್ತುವಳಿ ಮಾಡಬಾರದು. ಅದನ್ನು ನನ್ನ ಗಮನಕ್ಕೆ ತಂದರೆ ಆ ಅಧಿಕಾರಿಗಳ ಮೇಲೆ ಮತ್ತು ನ್ಯಾಯ ಬೆಲೆ ಅಂಗಡಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಸಾಕಷ್ಟು ಪ್ರಚಾರದ ಮೂಲಕ ತಿಳಿಸಿದ್ದೇವೆ. ಮಾನ್ಯ ಸದಸ್ಯರು ತಿಳಿಸಿರುವಂಥ ವಿಚಾರವನ್ನು ಗಮನಕ್ಕೆ ತೆಗೆದುಕೊಂಡಿದ್ದೇನೆ ಮತ್ತು ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಒಳ್ಳೆಯ ಅಕ್ಕಿಯನ್ನು ಕೊಡುವಂಥ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಕೆ. ಜಯರಾಮ ಶೆಟ್ಟಿ : ನಾನು ಕಳಪೆ ದರ್ಜೆಯ ಅಕ್ಕಿಯನ್ನು ತಂದಿದ್ದೇನೆ. ಅದನ್ನು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ.

ಅಧ್ಯಕ್ಷರು : ಅಧನ್ನು ಸರ್ಕಾರಕ್ಕೆ ಕಳುಹಿಸಿ ಕೊಡಿ.

(2) ತಮಿಳುನಾಡಿನ ಮುಖ್ಯಮಂತ್ರಿಯವರ ಮೇಲೆ ರಾಜ್ಯಪಾಲರಿಂದ ಖಟ್ಲೆ ಹಾಕಲು ಅನುಮತಿ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಸದನಕ್ಕೆ ಸಂಬಂಧಪಟ್ಟಿದ್ದಲ್ಲವೆಂದು ನನಗೆ ಅರ್ಥವಾಗಿದೆ. ಅಥವಾ ಮಾನ್ಯ ವಾಟಾಳ್ ನಾಗರಾಜ್‌ರವರು ಏನೂ ಗೊತ್ತಿಲ್ಲದೇ ಇದನ್ನು ತರುತ್ತಿದ್ದಾರೆ ಎಂಬ ಭಾವನೆ ಯಾರಿಗೂ ಬರುವುದು ಬೇಡ. ನಾವೂ, ನೀವು ಚರ್ಚೆ ಮಾಡುವಾಗ ನೀವೂ ಕೆಲವು ವಿಚಾರಗಳನ್ನು ಹೇಳಿದಿರಿ, ನಾನೂ ಕೆಲವು ವಿಚಾರಗಳನ್ನು ತಮ್ಮ ಜೊತೆ ಚರ್ಚೆ ಮಾಡಿದ್ದೇನೆ. ತಮಿಳ್ನಾಡಿನಲ್ಲಿ ಈಗ ಬಹಳ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ತಮಿಳು ನಾಡಿನ ಮಾನ್ಯ ರಾಜ್ಯಪಾಲರು ಅಲ್ಲಿನ ಮುಖ್ಯಿ ಮಂತ್ರಿಯವರ ಮೇಲೆ ಖಟ್ಲೆಯನ್ನು ಹಾಕಲು ಅನುಮತಿ ನೀಡಿರುವ ನನಗೆ ಆ ಸರ್ಕಾರದ ಬಗ್ಗೆ ಒಳ್ಳೆಯ ಅಭಿಪ್ರಾಯವಿಲ್ಲ.

ಅಧ್ಯಕ್ಷರು : ದಯವಿಟ್ಟು ಬೇಡಿ. ಇದು ಹೊಸ ಸಂಪ್ರದಾಯವಾಗುತ್ತದೆ. ದಯವಿಟ್ಟು ಕೇಳಿ.

ಶ್ರೀ ವಾಟಾಳ್ ನಾಗರಾಜ್ : ನಾನು ಇನ್ನೂ ಮುಂದಕ್ಕೆ ಹೋಗಿಲ್ಲ. ತಾವು ಅವಕಾಶವನ್ನು ಕೊಟ್ಟರೆ ನಾನು ಮಾತನಾಡುತ್ತೇನೆ. ಹಿಂದೆ ನಾನು ಮಾನ್ಯ ರಾಜ್ಯಪಾಲರ ಬಗ್ಗೆ ಈ ಸದನದಲ್ಲಿ ಮಾತನಾಡಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಇವತ್ತು ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ದಯವಿಟ್ಟು ಬೇಡ. ಅವರು ಹೇಳಿಕೆ ಕೊಟ್ಟಿರುವುದು ಬೇರೆ.

ಶ್ರೀ ಹೆಚ್.ಡಿ. ದೇವೇಗೌಡ : ಪಾಯಿಂಟ್ ಆಫ್ ಆರ್ಡರ್. ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಹೊರಗಡೆ ಏನು ಬೇಕಾದರೂ ಹೇಳಿಕೊಳ್ಳಲಿ. ಆದರೆ ಈ ಸದನದಲ್ಲಿ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ದಯವಿಟ್ಟು ಅವಕಾಶ ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಒಳ್ಳೆಯ ಸಂಪ್ರದಾಯವಲ್ಲ. ಮಾನ್ಯ ರಾಜ್ಯಪಾಲರ ನೀತಿಯನ್ನು ನಾನು ವಿರೋಧಿಸುತ್ತೇನೆ. ನಾಳೆ ಈ ಮುಖ್ಯಿ ಮಂತ್ರಿಯ ಮೇಲೆ ಮಾಡುತ್ತಾರೆ. ಪ್ರಜಾಪ್ರಭುತ್ವದಲ್ಲಿ ರಾಜ್ಯಪಾಲರುಗಳು ಮುಖ್ಯಿಮಂತ್ರಿಗಳ ಮೇಲೆ

(ಗೊಂದಲ)

ಅಧ್ಯಕ್ಷರು : ಡೋಂಟ್ ರೆಕಾರ್ಡ್. Let us create a new precedent.

(3) ಸದನದ ಹೊರಗಡೆ ಸರ್ಕಾರದ ಪಾಲಿಸಿ ವಿಚಾರಗಳನ್ನು ಪ್ರಸ್ತಾವನೆ

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ನಾವು ಒಂದು ಸತ್ಸಂಪ್ರದಾಯವನ್ನು ಹಾಕಿಕೊಂಡು ಬಂದಿದ್ದೇವೆ. ಸದನವು ನಡೆಯುವ ಕಾಲದಲ್ಲಿ ಪಾಲಿಸಿ ವಿಚಾರಗಳಿಗೆ ಸಂಬಂಧಪಟ್ಟಂತೆ ಯಾವುದೇ ವಿಚಾರವನ್ನೂ ಸದನದಿಂದ ಹೊರಗಡೆ ಪ್ರಸ್ತಾಪ ಮಾಡಬಾರದು ಎಂದು ಇದೆ. ಆದರೆ ನಾನು ಈಗ ಪ್ರಿವಿಲೇಜ್ ವಿಚಾರವನ್ನು ಹೇಳುತ್ತಿಲ್ಲ. ನಿನ್ನೆಯ ದಿವಸ ಪೊಲೀಸ್ ಅಧಿಕಾರಿಗಳಿಗೆ ಕೊಟ್ಟಿರತಕ್ಕ ಎಮಾಲ್ಯುಮೆಂಟ್ಸ್‌ನ್ನೆಲ್ಲಾ ಹೊರಗಡೆಯೇ ಅನೌನ್ಸ್ ಮಾಡಿದ್ದಾರೆ. ಮುಂದೆ ಇಂಥಾದ್ದು